## ಷೇರು ವಹಿವಾಟು ಜೂಜಲ್ಲ; ವಿಜ್ಞಾನ



ಹೂಡಿಕೆದಾರರನ್ನು ನಾವು ಮುನ್ನುಗ್ಗುವವರು (ಅಗ್ರೆಸಿವ್), ಮಾಡರೇಟ್ (ತುಸುವೇ ಧೈರ್ಯ ಇರುವವರು), ಕನ್ಸರ್ವೇಟಿವ್ (ಇದ್ದಷ್ಟು ಉಳಿಸಿಕೊಳ್ಳಬೇಕು ಎನ್ನುವವರು), ಪ್ಯಾಸಿವ್ (ತಲೆಬಿಸಿಯೇ ಬೇಡ ಎನ್ನುವವರು) ಎಂದು ವಿಂಗಡಿಸುತ್ತೇವೆ. ನಮ್ಮೊಂದಿಗೆ ಮುಕ್ತವಾಗಿ ಮಾತನಾಡುವವರಾದರೆ ಅವರ ಮನಸ್ಥಿತಿಯನ್ನು ಕಂಡುಕೊಂಡು ಅವರಿಗೆ ಎಂಥ ಹೂಡಿಕೆ ವಿಧಾನ ಸೂಕ್ತ ಎಂದು ಸಲಹೆ ನೀಡುತ್ತೇವೆ.

ಷೇರುಪೇಟೆಯಲ್ಲಿ ಟ್ರೇಡ್ ಮಾಡಲು ಬರುವವರು ಕಡ್ಡಾಯವಾಗಿ ಟರ್ಮ್ ಇನ್ಸುರೆನ್ಸ್, ಹೆಲ್ತ್ ಇನ್ಸುರೆನ್ಸ್, 2 ವರ್ಷ ಮನೆ ನಡೆಸಲು ಆಗುವಷ್ಟು ಹಣ ಕೈಲಿಟ್ಟುಕೊಂಡಿರಬೇಕು. ನಾಳೆಯ ಮನೆ ಖರ್ಚನ್ನು ಪೇಟೆಯಲ್ಲಿಯೇ ಹುಟ್ಟಿಸಿಕೊಂಡು ಜೀವನ ಮಾಡ್ತೀವಿ ಅನ್ನುವ ಸ್ಥಿತಿಯಿದ್ದವರು ದಯವಿಟ್ಟು ಟ್ರೇಡಿಂಗ್‌ನಿಂದ ದೂರವಿರಿ. ಹೂಡಿಕೆದಾರರಾಗಿ ಬನ್ನಿ, ನಿಮಗೆ ಸ್ವಾಗತ.

ಷೇರುಪೇಟೆಯಲ್ಲಿ ನಡೆಸುವ ಯಾವುದೇ ರೀತಿಯ ವಹಿವಾಟು ಜೂಜು ಅಲ್ಲ. ಅದರಲ್ಲಿ ವಿಜ್ಞಾನವಿದೆ, ನಡವಳಿಕೆ ವಿಶ್ಲೇಷಣೆಗಳು ಕೆಲಸ ಮಾಡುತ್ತವೆ. ಷೇರುಪೇಟೆಯಲ್ಲಿ ಕಂಪನಿಗಳ ನಡೆಯನ್ನೂ ಊಹಿಸಲು ಹಲವು ತಂತ್ರಗಳಿವೆ. ಅವನ್ನು ಅರ್ಥ ಮಾಡಿಕೊಂಡರೆ ಖಂಡಿತ ಇಲ್ಲಿ ಉಳಿಯಬಹುದು, ಬೆಳೆಯಬಹುದು.

**-ರಾಘವೇಂದ್ರ ಭಟ್,** ವೈಯಕ್ತಿಕ ಹಣಕಾಸು ಸಲಹೆಗಾರರು

ಸಂಚಾರ ಆರಂಭವಾಗದ ಕಾರಣ ಹೊಟೆಲ್ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳ ಚೇತರಿಕೆ ಮರೀಚಿಕೆ ಎಂಬಂತೆ ಆಗಿದೆ. ನಿರುದ್ಯೋಗ ಹೆಚ್ಚಾಗಿದ್ದು, ಆರ್ಥಿಕ ಹಿಂಜರಿತದ ಭೀತಿ ಕಾಣಿಸುತ್ತಿದೆ. ಹೀಗಾಗಿ ಇಂದಲ್ಲಾ ನಾಳೆ ಷೇರುಪೇಟೆ ಕುಸಿಯುತ್ತದೆ' ಎಂದು ಯುಟ್ಯೂಬರ್ ಹರ್ಷ ಗೋಯೆಲ್ ಸೇರಿದಂತೆ ಹಲವರು ವಿಶ್ಲೇಷಿಸುತ್ತಾರೆ.

ಆದರೆ ಹಿರಿಯರಾದ ಆನಂದ್ ರಾಠಿ ಅವರು ವೆಬಿನಾರ್ ಒಂದರಲ್ಲಿ ಪೇಟೆಯ ಮುನ್ನಡೆಯನ್ನು ಪ್ರಬಲವಾಗಿ ಸಮರ್ಥಿಸಿಕೊಂಡಿದ್ದಾರೆ.

'ಪೇಟೆ ಯಾವಾಗಲೂ ಭವಿಷ್ಯದ ಮುನ್ನೋಟ ಆಧರಿಸಿ ವಹಿವಾಟು ನಡೆಸುತ್ತದೆ. ಸುದ್ದಿಗಳು ಪೇಟೆಯ ಮೇಲೆ ಬೀರುವ ಪರಿಣಾಮ ತಾತ್ಕಾಲಿಕ. ದೀರ್ಘಕಾಲದ ಸಂಪತ್ತು ವೃದ್ಧಿಯನ್ನು ಗುರಿಯಾಗಿಸಿಕೊಂಡು ನಾವು ಹೂಡಿಕೆಯ ನಿರ್ಧಾರ ತೆಗೆದುಕೊಳ್ಳಬೇಕು. ಆರ್ಥಿಕತೆಯ ಆಧಾರ ಸ್ತಂಭಗಳಾಗಿರುವ ಹಲವು ಕಂಪನಿಗಳ ಗಳಿಕೆಯ ಸಾಮರ್ಥ್ಯ, ನೂರಾರು ಬ್ರೋಕರೇಜ್‌ಗಳ



**ಪೇಟೆ ಕುಸಿದಾಗ ತಲೆ ಮೇಲೆ ಕೈಹೊತ್ತು ಕೂರುವುದು ಸಹಜ.**

**ಷೇರು ಯೋಚಿಸಿ ತೆಗೆದುಕೊಳ್ಳಬೇಕು**

ಸಾವಿರಾರು ವಿಶ್ಲೇಷಕರ ಶಿಫಾರಸು, ವಿವಿಧ ಎಎಂಸಿಗಳ ಫಂಡ್ ಮ್ಯಾನೇಜರ್‌ಗಳು ತೆಗೆದುಕೊಳ್ಳುವ ಸಮಷ್ಟಿ ನಿರ್ಧಾರಗಳು ಪೇಟೆಯ ನಡೆಯನ್ನು ನಿರ್ಧರಿಸುತ್ತದೆ. ಅವರೆಲ್ಲರೂ ಸಡಿಲ ಪಾಯದ ಮೇಲೆ ಸೌಧಕಟ್ಟುವಷ್ಟು ದಡ್ಡರಲ್ಲ. ಈ ಮುನ್ನಡೆ ಶೀಘ್ರದಲ್ಲಿಯೇ ಕುಸಿಯಲಿದೆ ಎನ್ನಲು ತಕ್ಕಷ್ಟು ಆಧಾರಗಳಿಲ್ಲ' ಎನ್ನುತ್ತಾರೆ ಅವರು.

'ನಿಫ್ಟಿ ಈಗಾಗಲೇ 8200ರ ತಳಮುಟ್ಟಿ, ಚೇತರಿಸಿಕೊಂಡಿದೆ. ಇನ್ನೊಮ್ಮೆ ಆ ಮಟ್ಟ ಮುಟ್ಟಿದರೆ ಚೇತರಿಸಿಕೊಳ್ಳಲು ವರ್ಷಗಳೇ ಬೇಕಾದೀತು. ಚಿನ್ನ ಮತ್ತು ಷೇರುಪೇಟೆ ಎರಡೂ ಒಟ್ಟೊಟ್ಟಿಗೆ ಮೇಲೆ ಹೋದ ನಿದರ್ಶನಗಳು ಈವರೆಗೆ ಇರಲಿಲ್ಲ. ಈಗಿನ ಪರಿಸ್ಥಿತಿ ನೋಡಿದರೆ ಎರಡರಲ್ಲಿ ಒಂದು ಬೇಗನೇ ಬೀಳಬಹುದು' ಎನ್ನುತ್ತಾರೆ ಸಕ್ರಿಯ ಹೂಡಿಕೆದಾರ ಶ್ರೀವತ್ಸ.

'ಷೇರುಪೇಟೆಯು ಈಗ ಉನ್ನತ ಮಟ್ಟದಲ್ಲಿದೆ. ಅದು ಇನ್ನಷ್ಟು ಲಾಭ ತಂದುಕೊಡುವುದು ತಡವಾಗಬಹುದು. ಆದರೆ ಕುಸಿಯಲಾರದು' ಎಂದು ಅಭಿಪ್ರಾಯಪಡುತ್ತಾರೆ ಹೂಡಿಕೆ ಸಲಹೆಗಾರ ಶರಣ್ ಪಾಟೀಲ್.

### ಹೂಡಿಕೆಗೆ ಎಂಥ ಕಂಪನಿ ಸೂಕ್ತ?

ಯಾವುದೇ ದೇಶದ ಯಾವುದೇ ಕಂಪನಿ ಕೋವಿಡ್‌ಗೆ ಲಸಿಕೆ ಅಭಿವೃದ್ಧಿಪಡಿಸಿದರೂ, ಲಸಿಕೆಯ ದೊಡ್ಡಮಟ್ಟದ ಉತ್ಪಾದನೆಗೆ ಭಾರತದ ಫಾರ್ಮಾ ಕಂಪನಿಗಳ ಸಹಕಾರ ಬೇಕೇಬೇಕು. ಸಹಜವಾಗಿಯೇ ಇದು ಇಲ್ಲಿನ ಫಾರ್ಮಾ ಕಂಪನಿಗಳ ಹಣಕಾಸಿನ ಸ್ಥಿತಿ ಸುಧಾರಿಸಲು ಕಾರಣವಾಗುತ್ತದೆ. ಕೋವಿಡ್ ನಂತರದ ಸಮಾಜದಲ್ಲಿ ಆರೋಗ್ಯಕ್ಕೆ ಹೆಚ್ಚು ಸಿಗುತ್ತದೆ ಎಂಬುದು ಮತ್ತೊಂದು ಲೆಕ್ಕಾಚಾರ. ಹೀಗಾಗಿಯೇ ಫಾರ್ಮಾ ಕಂಪನಿಗಳ ಷೇರುಬೆಲೆ ಈಗಾಗಲೇ ಹೆಚ್ಚಾಗಿದೆ, ಇನ್ನಷ್ಟು ಏರುವ ನಿರೀಕ್ಷೆಯಿದೆ.

ಕೋವಿಡ್ ತಂದೊಡ್ಡಿದ್ದ ಅನಿರೀಕ್ಷಿತ ಆಘಾತವು ಹಲವರಲ್ಲಿ ವಿಮೆ ಮತ್ತು ಹೂಡಿಕೆಯ ಬಗ್ಗೆ ಆಸಕ್ತಿ ಹೆಚ್ಚಿಸಿದೆ. ಈ ಬಾರಿ ಸಾಕಷ್ಟು ಹೊಸಬರು ಆರೋಗ್ಯ ವಿಮೆ ಖರೀದಿಸಿದ್ದಾರೆ. ಜೀವವಿಮೆಯ ಕಂತುಗಳನ್ನು ಆಸ್ಥೆಯಿಂದ ತುಂಬಿದ್ದಾರೆ. ವರ್ಕ್ ಫ್ರಂ ಹೋಂ ತಂದುಕೊಟ್ಟ ಹೊಸ ಅವಕಾಶಗಳಿಂದಾಗಿ ಷೇರು ಮಾರುಕಟ್ಟೆಯು ಯುವಜನರ ಹೂಡಿಕೆಗೆ ನೆಚ್ಚಿನ ತಾಣವಾಗಿದೆ. ಪ್ರಮುಖ ಎಎಂಸಿಗಳಲ್ಲಿ ಡಿಮಾಟ್ ಸಂಖ್ಯೆ ಮತ್ತು ವಹಿವಾಟು ಪ್ರಮಾಣ ಹೆಚ್ಚಾಗಿದೆ. ಈ ಎಲ್ಲ ಲೆಕ್ಕಾಚಾರಗಳ ಮೇಲೆ ವಿಮಾ ಕಂಪನಿಗಳು ಮತ್ತು ಷೇರು ವಹಿವಾಟು ನಡೆಸುವ ಕಂಪನಿಗಳು ಮುಂದಿನ ದಿನಗಳಲ್ಲಿ ಉತ್ತಮ ಫಲಿತಾಂಶ ಘೋಷಿಸಬಹುದು ಎಂಬ ನಿರೀಕ್ಷೆ ವ್ಯಕ್ತವಾಗಿದೆ. ಈ ವಲಯದ ಕಂಪನಿಗಳ ಮೌಲ್ಯವೂ ಹೆಚ್ಚಾಗಿದೆ.

ವರ್ಕ್ ಫ್ರಂ ಹೋಂ ಇನ್ನೂ ಕೆಲಕಾಲ ಚಾಲ್ತಿಯಲ್ಲಿರಬಹುದು. ಈ ವ್ಯವಸ್ಥೆಯು ಐಟಿ ಕಂಪನಿಗಳ ಕಾರ್ಯನಿರ್ವಹಣಾ ವೆಚ್ಚವನ್ನು ಸಾಕಷ್ಟು ಕಡಿಮೆಮಾಡಿದೆ. ಇನ್ನೊಂದೆಡೆ ರೂಪಾಯಿ ಎದುರು ಡಾಲರ್ ಮೌಲ್ಯ ಹೆಚ್ಚುತ್ತಿದೆ. ಇಂಟರ್ನೆಟ್ ಆಫ್ ಥಿಂಗ್ಸ್‌ನ ಹೊಸ ಸಾಧ್ಯತೆಗಳನ್ನು ಎಲ್ಲರೂ ಆಸಕ್ತಿಯಿಂದ ಗಮನಿಸಿ, ಅಳವಡಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಈ ಎಲ್ಲ ವಿದ್ಯಮಾನಗಳೂ ಐಟಿ ಉದ್ಯಮಕ್ಕೆ ಪೂರಕ.

ಸದ್ಯದ ಪರಿಸ್ಥಿತಿಯಲ್ಲಿ ಫಾರ್ಮಾ ಮತ್ತು ಅತ್ಯಗತ್ಯ ಉತ್ಪನ್ನಗಳನ್ನು ಪೂರೈಸುವ ಎಫ್‌ಎಂಸಿಜಿ ಕಂಪನಿಗಳಲ್ಲಿ ಹೂಡಿಕೆ ಲಾಭಕರ. ಮುಂದಿನ ದಿನಗಳಲ್ಲಿ ವಿಮೆ, ಎಎಂಸಿಗಳು, ಐಟಿ ಕಂಪನಿಗಳಲ್ಲಿ ಹೂಡಿಕೆ ಲಾಭಕರ ಎಂಬುದು ಆಗಸ್ಟ್ ತಿಂಗಳಲ್ಲಿ ಚಾಲ್ತಿಯಲ್ಲಿರುವ ವಿಶ್ಲೇಷಣೆ. 'ಸೆಬಿ' ಪ್ರಮಾಣೀಕೃತ ಹಣಕಾಸು ಸಲಹೆಗಾರರ ಮಾರ್ಗದರ್ಶನದಲ್ಲಿಯೇ ಹೂಡಿಕೆ ನಿರ್ಧಾರಗಳನ್ನು ತೆಗೆದುಕೊಳ್ಳಬೇಕು ಯಾವಾಗಲೂ ಉತ್ತಮ.ಒಂದಂತೂ ನಿಜ. ಷೇರುಪೇಟೆ ತಾಳ್ಮೆ ಹಾಗ ಅಧ್ಯಯನಶೀಲತೆಯನ್ನು ಬಯಸುವ ಕ್ಷೇತ್ರ. ಇವುಗಳ ಜೊತೆಗೆ ಕೊಂಚ ಅದೃಷ್ಟವೂ ಅಗತ್ಯ ಎನ್ನುವುದನ್ನೂ ಗಮನದಲ್ಲಿಡಬೇಕು.

ಪ್ರತಿಕ್ರಿಯಿಸಿ: feedback@sudha.co.in